ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ * ಮೈತ್ರಿಯಿಂದ ಪ್ರಗತಿ, ಧ್ಯಾನದಿಂದ ಸಿದ್ಧಿ

# ಗೊಮ್ಮಟವಾಣಿ

44ನೇ ವರ್ಷದ ಪ್ರಕಾಶನದತ್ತ

ಅಂತಿಮ ಶ್ರುತಕೇವಲಿ ಶ್ರೀ ಭದ್ರಬಾಹು ಚರಣ

ಸ್ಥಾಪನೆ : 01.01.1980 ಧಾರ್ಮಿಕ ಪಾಕ್ಷಿಕ ಪತ್ರಿಕೆ

ದಿನಾಂಕ : 15.12.2023 : ಶ್ರವಣಬೆಳಗೊಳ ಪ್ರಧಾನ ಸಂಪಾದಕರು : ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ವೀರಸಂವತ್ : 2550 ಪುಟಗಳು : 4

ಸಂಪುಟ : 17 ಸಂಚಿಕೆ : 24 ಸೋಪಾನ : 1051 RNI No. KARKAN/2008/28274 Postal Regn. No. HSN/765/2021-23 WPP : No. SK/wpp/HSN-109/2021-23

### ಜಿನಭಾಷಿತ

ಅಹ ಪಂಚಹಿಂ ಠಾಣೇಹಿಂ ಜೇಹಿಂ ಸಿಕ್ಖಾ ಣ ಲಬ್ಭಈ ।
ಥಂಭಾ ಕೋಹಾ ಪಮಾಏಣಂ, ರೋಗೇಣಾऽಲಸ್ಸೇಣ ಯ ॥ ಸಮಣಸುತ್ತಂ, ಸಿಕ್ಖಾಸುತ್ತಂ–2

ಅಹಂಕಾರ, ಕೋಪ, ಉನ್ಮತ್ತತೆ, ರೋಗ ಹಾಗೂ ಆಲಸ್ಯ ಈ ಐದು ಕಾರಣಗಳಿಂದ ಜ್ಞಾನವು ಪ್ರಾಪ್ತವಾಗುವುದಿಲ್ಲ.

### ಶ್ರೀಕ್ಷೇತ್ರ ಶ್ರವಣಬೆಳಗೊಳ

: ವಿಂಧ್ಯಗಿರಿ ಮತ್ತು ಚಂದ್ರಗಿರಿ ದರ್ಶನದ ಸಮಯ :
ಬೆಳಗ್ಗೆ 6–30 ರಿಂದ ಸಂಜೆ 6–00ರವರೆಗೆ
ಪೂಜಾ ಸಮಯ
ಬೆಳಗ್ಗೆ 8–00 ರಿಂದ ಬೆಳಗ್ಗೆ 10–00ರವರೆಗೆ
ದೂರವಾಣಿ : 9008954636

: ಶ್ರೀಮಠ ದರ್ಶನ ಸಮಯ :
ಬೆಳಗ್ಗೆ 6–30 ರಿಂದ ರಾತ್ರಿ 8–00ರವರೆಗೆ
ಪೂಜಾ ಸಮಯ
ಬೆಳಗ್ಗೆ 7–00 ರಿಂದ ಬೆಳಗ್ಗೆ 9–00ರವರೆಗೆ
ದೂರವಾಣಿ : 9844143722

: ಶ್ರೀಮಠದ ಕಛೇರಿ :
ದೂರವಾಣಿ : 8431560480

: ವಸತಿ ವಿಭಾಗದ ಕಛೇರಿ :
ದೂರವಾಣಿ : 9353667645

: ಅಕ್ಷಯ ಶ್ರಾವಕ ಸತ್ಕಾರ ಭೋಜನಾಲಯದ ಸಮಯ :
ಉಪಹಾರ : ಬೆಳಗ್ಗೆ 08.00ರಿಂದ 09.30ರವರೆಗೆ
ಭೋಜನ : 10.30ರಿಂದ ಮಧ್ಯಾಹ್ನ 03.00
ಸಂಜೆ : 04.30 ರಿಂದ 06.30 ರವರೆಗೆ

**ಹೊರೆಕಾಣಿಕೆ ಸ್ವೀಕರಿಸಲಾಗುವುದು**

ಶ್ರೀಕ್ಷೇತ್ರಕ್ಕೆ ಆಹಾರ, ಔಷಧ, ವಿದ್ಯಾದಾನಕ್ಕೆ ಈ ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ದಾನ ನೀಡಬಹುದು

Paytm G Pay PhonePe

ವರ್ಣಮುದ್ರಿತ ಗೊಮ್ಮಟವಾಣಿ ಪತ್ರಿಕೆ ನಿಮ್ಮ ಮನೆಗೆ ತಲುಪುತ್ತಿಲ್ಲವೇ....?
ಸಂಪರ್ಕಿಸಿ : 8660118443
ವಾರ್ಷಿಕ ಚಂದಾ : ರೂ. 250–00
ಆಜೀವ ಸದಸ್ಯತ್ವ : ರೂ. 2,500–00

## ಪ್ರಾತಃಸ್ಮರಣೀಯ ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ 54ನೇ ದೀಕ್ಷಾ ಮಹೋತ್ಸವ







ಶ್ರವಣಬೆಳಗೊಳ, ಡಿ. 12: ಪ್ರಾತಃಸ್ಮರಣೀಯ ಪ.ಪೂ. ಜಗದ್ಗುರು ಕರ್ಮಯೋಗಿ, ಆಧ್ಯಾತ್ಮಯೋಗಿ, ಸ್ಯಾದ್ವಾದ ಸಿದ್ಧಾಂತ ಚಕ್ರವರ್ತಿ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ 54ನೇ ದೀಕ್ಷಾ ದಿವಸದಂದು ಪ್ರಾತಃಕಾಲ ಪ.ಪೂ. ಜಗದ್ಗುರು ಸ್ವಸ್ತಿಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಪೂಜ್ಯ ದೀಕ್ಷಾ ಗುರುಗಳ ನಿಷಧಿಯಲ್ಲಿ ಅಷ್ಟವಿದಾರ್ಚನೆ ಪೂಜೆ ಭಕ್ತಿ ಸಮರ್ಪಿಸಲಾಯಿತು. ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು, ಪುರೋಹಿತ ವರ್ಗದವರು, ಊರಿನ ಶ್ರಾವಕ ಶ್ರಾವಕಿಯರು, ಆಶ್ರಮದ ವಿದ್ಯಾರ್ಥಿಗಳು ನಿಷದಿಗೆ ಪುಷ್ಪಾರ್ಚನೆ ಸಲ್ಲಿಸಿದರು.

ಸಂಜೆ 7 ಗಂಟೆಗೆ ಪುಷ್ಪಾಲಂಕೃತ ವಾಹನದಲ್ಲಿ ಪ್ರಾತಃಸ್ಮರಣೀಯ ಕರ್ಮಯೋಗಿ ಶ್ರೀಗಳವರ ಭಾವಚಿತ್ರದೊಂದಿಗೆ ಊರಿನ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ಹಾಗೂ ಪ.ಪೂ. ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಸ್ವಾಮಿಗಳವರು ಶ್ರೀಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

1969ರ ಡಿಸೆಂಬರ್ 12ರಂದು ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಭಟ್ಟಾಕಲಂಕ ಚಾರುಕೀರ್ತಿ ಮಹಾಸ್ವಾಮಿಗಳವರಿಂದ ದೀಕ್ಷಿತರಾಗಿ ಶ್ರೀಮಠದ ಜವಾಬ್ದಾರಿಯನ್ನು ವಹಿಸಿಕೊಂಡು ಶ್ರೀಕ್ಷೇತ್ರದ ಅಭಿವೃದ್ಧಿಯ ಜೊತೆಗೆ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಅಪಾರ ಸೇವೆ ಸಲ್ಲಿಸಿ ಶ್ರವಣಬೆಳಗೊಳವನ್ನು ವಿಶ್ವಖ್ಯಾತಗೊಳಿಸಿದ ಕೀರ್ತಿ ಪೂಜ್ಯ ಕರ್ಮಯೋಗಿ ಶ್ರೀಗಳವರಿಗೆ ಸಲ್ಲುತ್ತದೆ.

## ಅಭಿನವ ಚಾರುಶ್ರೀಗಳವರ ದೀಕ್ಷಾ ದಿವಸ ಸಮಾರಂಭ




ಶ್ರವಣಬೆಳಗೊಳ, ಡಿ. 2: ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ ದೀಕ್ಷಾ ದಿನದಂದು ಸಂಜೆ ಶ್ರೀಗಳವರಿಗೆ ಪಾದಪೂಜೆ ನೆರವೇರಿಸಿ ಅಷ್ಟವಿದಾರ್ಚನೆ ಪೂಜೆಯೊಂದಿಗೆ ಆರತಿ ಬೆಳಗಿದರು. 2022ರ ಡಿಸೆಂಬರ್ 2ರಂದು ಪ್ರಾತಃಸ್ಮರಣೀಯ ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರಿಂದ ದೀಕ್ಷಿತರಾಗಿ ಪ್ರಥಮ ವರ್ಷ ಪೂರೈಸಿದ ಶುಭಸಂದರ್ಭದಲ್ಲಿ ಭಕ್ತಿ ಪೂಜೆ ಸಮರ್ಪಿಸಲಾಯಿತು. ಹಾಜರಿದ್ದ ಶ್ರವಣಬೆಳಗೊಳ ದಿಗಂಬರ ಸಮಾಜ, ಮಹಿಳಾ ಸಮಾಜದ ಸದಸ್ಯರುಗಳಿಗೆ, ಕಮಿಟಿಯ ಕಾರ್ಯಾಧ್ಯಕ್ಷರು, ಸದಸ್ಯರು, ಸಿಬ್ಬಂದಿಯವರು ಪಾಲ್ಗೊಂಡು ಪೂಜ್ಯ ಶ್ರೀಗಳವರಿಂದ ಆಶೀರ್ವಾದ ಪೂರ್ವಕ ಶ್ರೀಫಲ ಸ್ವೀಕರಿಸಿದರು.



## ಪುರಾತತ್ವ ಇಲಾಖೆಯ ಮಾಜಿ ಅಧೀಕ್ಷಕರ ಭೇಟಿ

**ಶ್ರವಣಬೆಳಗೊಳ, ಡಿ. 9:** ಬೆಂಗಳೂರು ವೃತ್ತದ ಪುರಾತತ್ವ ಇಲಾಖೆಯ ಮಾಜಿ ಅಧೀಕ್ಷಕರಾದ ಡಾ. ಕೆ. ಮೂರ್ತೀಶ್ವರಿರವರು ಹಾಗೂ ಅವರ ಪತಿ ಶ್ರೀ ಪ್ರದೀಪ್‌ರವರೊಂದಿಗೆ ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಪ.ಪೂ. ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರ ಮತ್ತು ಕನಕಗಿರಿಯ ಪ.ಪೂ. ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮಿಗಳವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ 2018ರ ಮಹಾಮಸ್ತಕಾಭಿಷೇಕ ಮಹೋತ್ಸವದ ನೆನಪುಗಳನ್ನು ಹಂಚಿಕೊಂಡರು. ಶಿಥಿಲಗೊಂಡ ಬಸದಿಗಳ ಜೀರ್ಣೋದ್ಧಾರ, ಯುನೆಸ್ಕೊ ಮಾನ್ಯತೆ ಹಾಗೂ ವಿಂಧ್ಯಗಿರಿ ಮತ್ತು ಚಂದ್ರಗಿರಿಯಲ್ಲಿ ಪುರಾತತ್ವ ಇಲಾಖೆಯಿಂದ ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ಚಾರುಶ್ರೀಗಳವರೊಂದಿಗೆ ಚರ್ಚಿಸಿದರು. ಡಾ. ಮೂರ್ತೀಶ್ವರಿರವರು 2018ರ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಅತ್ಯಲ್ಪ ಅವಧಿಯಲ್ಲಿ ಪುರಾತತ್ವ ಇಲಾಖೆಗೆ ಸಂಬಂಧಿಸಿದ ಕೆಲಸಗಳನ್ನು ಅತ್ಯುತ್ತಮವಾಗಿ ನಿರ್ವಹಿಸಿ ಪ.ಪೂ. ಕರ್ಮಯೋಗಿ ಚಾರುಶ್ರೀಗಳವರಿಂದ ಮೆಚ್ಚುಗೆಯನ್ನು ಪಡೆದಿದ್ದರು.

### ಚಾರುಶ್ರೀ ವಾಣಿ



ಭ. ಶ್ರೀ ಮಹಾವೀರರ ಉಪದೇಶಗಳು ಒಂದೇ ಒಂದು ಜಾತಿ, ಮತ, ಪಂಥಕ್ಕೆ ಸೀಮಿತವಾಗಿರಲಿಲ್ಲ. ಅವರ ಉಪದೇಶಗಳಲ್ಲಿ ಜೀವಗಳ ಕಲ್ಯಾಣವೇ ಮುಖ್ಯವಾಗಿದೆ.

ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು

### ಅಭಿನವ ಚಾರುಶ್ರೀ ನುಡಿ



**ಹಣದಿಂದ ಭೂಷಣರಾಗದೇ ಗುಣದಿಂದ ಭೂಷಣರಾಗಬೇಕು.**

ಜೀವನ ಎಂಬ ಒಂದು ಸಾಗರದಲ್ಲಿ ಸಾಗುವಾಗ ಸಾಧನೆಯು ಗುರಿಯಾಗಬೇಕು. ಆ ಸಾಧನೆಯಿಂದ ಒಂದು ಶಾಶ್ವತವಾದ ಹೆಸರನ್ನು ಸಂಪಾದಿಸಬೇಕು. ವ್ಯಕ್ತಿಯೊಬ್ಬ ಈ ಜೀವನದಿಂದ ಕಣ್ಮರೆಯಾದರೂ ಆ ವ್ಯಕ್ತಿಯ ಹೆಸರು ನಿರಂತರವಾಗಿ ಪ್ರಜ್ವಲಿಸಬೇಕು. ಅದು ಇತರರ ಬಾಳಿಗೂ ಬೆಳಕಾಗಬೇಕು. ಆಗ ಮಾತ್ರ ಜಗತ್ತಿನಲ್ಲಿ ಮನುಷ್ಯ ಭವದಲ್ಲಿ ಜನ್ಮ ಪಡೆದಿದ್ದಕ್ಕೆ ಸಾರ್ಥಕವೆನಿಸುತ್ತದೆ.

ತೀರ್ಥಂಕರರನ್ನು, ಜೈನಾಚಾರ್ಯರನ್ನು, ಜೈನ ಮಹಿಳೆಯರನ್ನು ರಾಜರನ್ನು ದಂಡನಾಯಕರನ್ನು ಇಂದಿಗೂ ನಾವು ನೆನೆಯುತ್ತೇವೆ. ಕಾರಣ ಅವರು ಮಾಡಿದ ಕಾರ್ಯಗಳು, ಅವರು ಸಂಪಾದಿಸಿದ ಗುಣಗಳು, ಅವರ ಹೆಸರನ್ನು ಶಾಶ್ವತವಾಗಿ ಉಳಿಯುವಂತೆ ಮಾಡಿದೆ. ಮಹಾವೀರ, ಬುದ್ದ ಮಹಾತ್ಮಗಾಂಧಿ ಅಬ್ದುಲ್‌ಕಲಾಂ, ವಿವೇಕಾನಂದರು ಇದೇ ಹಾದಿಯಲ್ಲಿ ಸಾಗಿ ಮಹಾತ್ಮ ಎನಿಸಿಕೊಂಡಿರುವರು. ಹಾಗಾಗಿ ಪ್ರತಿಯೊಂದು ಜೀವಿಯು ಸಹ ತನ್ನ ವ್ಯಕ್ತಿತ್ವದ ಕಾರಣದಿಂದಲೇ ಪ್ರತಿಯೊಬ್ಬರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತಾನೆ.

ಜೀವನದಲ್ಲಿ ಯಶಸ್ಸು ಎಂಬುದು ಯಾರನ್ನು ಹುಡುಕಿಬರುವುದಿಲ್ಲ ಬದಲಾಗಿ ಪರಿಶ್ರಮ ಮತ್ತು ನಿರಂತರ ಪ್ರಯತ್ನದಿಂದ ಯಶಸ್ಸು ಸಿಗಲು ಸಾಧ್ಯ ಹಾಗೆಯೇ ಗುಣವು ಸಹ. ಉಳಿಪೆಟ್ಟು ತಿಂದ ಕಲ್ಲು ಮಾತ್ರ ಸುಂದರ ಮೂರ್ತಿಯಾಗುತ್ತದೆ. ಕಾಯಿಸಿದ ಚಿನ್ನ ಮಾತ್ರ ಹೊಳೆಯುವ ಆಭರಣವಾಗುತ್ತದೆ. ಹಾಗೆಯೇ ನೋವು ತಿಂದಷ್ಟು ಮೌಲ್ಯ ಹೆಚ್ಚಾಗುತ್ತದೆ.

ಯಾವುದನ್ನೂ ಹಣ, ಅಧಿಕಾರದಿಂದ ಪಡೆಯಲಾಗದು. ಪ್ರೀತಿ, ವಿಶ್ವಾಸ, ಗುಣಗಳಿಂದ ಪಡೆಯುವ ಗೆಲುವು ಶಾಶ್ವತವಾಗುತ್ತದೆ. ದ್ವೇಷದಿಂದ ದ್ವೇಷ ಗೆಲ್ಲಲಾಗದು ತ್ಯಾಗ ಮತ್ತು ಮೈತ್ರಿಯನ್ನು ಜಗತ್ತಿಗೆ ತೋರಿದ್ದರಿಂದಲೇ ಬಾಹುಬಲಿಯು ಇಂದಿಗೂ ಪೂಜ್ಯರಾಗಿದ್ದಾರೆ.

ಗುಣವನ್ನು ಹಣದಿಂದ ಕೊಂಡುಕೊಳ್ಳಲಾಗದು ಸಿರಿವಂತನು ಕೇವಲ ತನ್ನ ಬಗ್ಗೆ ಚಿಂತಿಸಿದರೆ ಗುಣವಂತನು ಬೇರೆಯವರ ಬಗ್ಗೆ ಚಿಂತಿಸುತ್ತಾನೆ ಮನುಷ್ಯ ಜೀವನದಲ್ಲಿ ಎತ್ತರಕ್ಕೆ ಏರಬೇಕಾದರೆ ಅದು ಅವನ ಗುಣವಂತಿಕೆಯಿಂದ ಮಾತ್ರ. ಹಣದಿಂದ ಸಂಪಾದಿಸುವ ಹೆಸರು ಕ್ಷಣಿಕ. ಗುಣದಿಂದ ಸಂಪಾದಿಸುವ ಹೆಸರು ಶಾಶ್ವತ.

ಗುಣವಂತರಲ್ಲಿ ಇರುವ ಹಣ ಮತ್ತು ಜ್ಞಾನ ಪರೋಪಕಾರಕ್ಕಾಗಿ ವಿನಿಯೋಗವಾಗುತ್ತದೆ ಹೊರತು ಸ್ವಾರ್ಥಕ್ಕಾಗಿಯಲ್ಲ. ದುರ್ಜನರಲ್ಲಿ ಇರುವ ಹಣ ಅವರ ದುರ್ಗುಣಗಳಿಗೆ ವಿನಿಯೋಗವಾಗುತ್ತದೆ.

ಹಣವನ್ನು ವ್ಯಕ್ತಿಯನ್ನು ರಕ್ಷಿಸಿದರೆ. ಗುಣವು ವ್ಯಕ್ತಿತ್ವವನ್ನು ರಕ್ಷಿಸುತ್ತದೆ. ಆದ್ದರಿಂದ ಜ್ಞಾನವೆಂಬ ಗುಣದಂತೆ ಎಲ್ಲರಿಗೂ ಬೆಳಕಾದರೆ ಅಜ್ಞಾನವೆಂಬ ಹಣವು ಎಲ್ಲರನ್ನು ಕತ್ತಲಲ್ಲಿ ದೂಡುತ್ತದೆ. ಗುಣ ಮತ್ತು ಹಣ ಎರಡೂ ಒಬ್ಬ ವ್ಯಕ್ತಿಯಲ್ಲಿದ್ದರೆ ಅದು ಇಡಿ ಜಗತ್ತನ್ನು ಬೆಳಗುತ್ತದೆ.

ಹಣವನ್ನು ಸಂಪಾದಿಸಲು ಘಳಿಗೆ ಸಾಕು ಗುಣವನ್ನು ಸಂಪಾದಿಸಲು ವರ್ಷಗಳೇ ಬೇಕು. ಜ್ಞಾನ ಗುಣದಿಂದ ತೀರ್ಥಂಕರರು, ಆಚಾರ್ಯರು, ದಾನಗುಣದಿಂದ ಪುರಾಣದಲ್ಲಿ ಕರ್ಣ, ಇತಿಹಾಸದಲ್ಲಿ ಅತಿಮಬ್ಬೆ ಹೆಸರಾದಂತೆ ನಾವು ಸಹ ಹಣದಿಂದ ಭೂಷಣರಾಗದೇ ಗುಣದಿಂದ ಭೂಷಣರಾಗಬೇಕು.

ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು

## ಕುಣಿಗಲ್ ಬಸದಿ ನೂತನ ಮಾನಸ್ತಂಭ ಪ್ರತಿಷ್ಠಾಪನೆ



**ಕುಣಿಗಲ್** : ನೂತನ ಶ್ರೀ ಪಾರ್ಶ್ವನಾಥ ಜಿನಮಂದಿರದ ನೂತನ ಮಾನಸ್ತಂಭದ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಆರತಿಪುರದ ಪ.ಪೂ. ಸ್ವಸ್ತಿಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮಿಗಳವರು ಪಾವನ ಸಾನಿಧ್ಯವಹಿಸಿ ಆಶೀರ್ವಚನ ನೀಡುತ್ತಾ 'ಯಾವುದೇ ಧರ್ಮಕಲ್ಯಾಣ ಕಾರ್ಯಕ್ರಮದ ಯಶಸ್ವಿಗೆ ಮನುಷ್ಯನ ಉತ್ತಮ ಭಾವನೆಗಳು ಅತಿ ಅಗತ್ಯ. ಇಂದು ಎಲ್ಲರ ಸಹಕಾರದಿಂದ ನೂತನ ಶಿಲಾಮಯ ಬಸದಿ ನಿರ್ಮಾಣವಾಗುತ್ತಿದೆ. ನೂತನ ಬಸದಿಯ ಪಂಚಕಲ್ಯಾಣ ಕಾರ್ಯಕ್ರಮಗಳು ವೈಭವಯುತವಾಗಿ ನಡಯಲಿವೆ' ಎಂದು ಆಶಿಸಿದರು. ಮಾನಸ್ತಂಭದ ದಾನಿಗಳಾದ ಎನ್.ಬಿ. ಶ್ರೇಯಂಸಕುಮಾರ್, ಕುಣಿಗಲ್ ಜೈನ ಸಮಾಜದ ಅಧ್ಯಕ್ಷ ಡಿ.ಮೋಹನ್ ಕುಮಾರ್ ಹಾಗೂ ಕುಣಿಗಲ್, ಸಂಕೀಘಟ್ಟ, ಮಾಯಸಂದ್ರ ,ತುಮಕೂರು, ಗುಬ್ಬಿ, ಸೇರಿದಂತೆ ಇತರೆಡೆಗಳಿಂದ ಧರ್ಮಬಂಧುಗಳು ಭಾಗವಹಿಸಿದ್ದರು.

## ದಾವಣಗೆರೆ ಆದಿನಾಥ ಜಿನಮಂದಿರದ ದಶಮಾನೋತ್ಸವ

### ಹಾಗೂ ಮಹಾವೀರ ಸಂಘದ ಸುವರ್ಣ ಮಹೋತ್ಸವ






**ದಾವಣಗೆರೆ, ಡಿ.9** : ಶ್ರೀ ಕಲ್ಪದ್ರುಮ ಆದಿನಾಥ ಜಿನಮಂದಿರದ ದಶಮಾನೋತ್ಸವ ಹಾಗೂ ಶ್ರೀ ಮಹಾವೀರ ಸಂಘದ ಸುವರ್ಣ ಮಹೋತ್ಸವವು ಕುವೆಂಪು ಕನ್ನಡ ಭವನದಲ್ಲಿ ಜರುಗಿತು. 24 ತೀರ್ಥಂಕರರಿಗೆ ವಿಶೇಷ ಕಲ್ಪದ್ರುಮ ಮಹಾಭಿಷೇಕ, ಶ್ರೀ ಭಕ್ತಾಮರ ಆರಾಧನೆಯು ನೆರವೇರಿತು. ಹೊಂಬುಜ, ನರಸಿಂಹರಾಜಪುರ ಹಾಗೂ ಸೋಂದಾ ಮಠಗಳ ಭಟ್ಟಾರಕ ಶ್ರೀಗಳವರು ಪಾವನ ಸಾನ್ನಿಧ್ಯ ವಹಿಸಿದ್ದರು. ಊರಿನ ಪ್ರಮುಖ ರಸ್ತೆಗಳಲ್ಲಿ ವೈಭವದೊಂದಿಗೆ ಭವ್ಯ ಮೆರವಣಿಗೆ ಸಾಗಿತು.

## ಸಾಲಿಗ್ರಾಮ ಬಸದಿಯಲ್ಲಿ ಕಳಸಾರೋಹಣ



**ಸಾಲಿಗ್ರಾಮ, ನ. 20** : ಕೋಟೆ 1008 ಶ್ರೀ ಅನಂತನಾಥಸ್ವಾಮಿ ಬಸದಿಯಲ್ಲಿ ಕಳಸಾರೋಹಣ ಮತ್ತು ಕುಂಭಾಭಿಷೇಕ ಮಹೋತ್ಸವವು ಕನಕಗಿರಿ ಹಾಗೂ ಸಿಂಹನಗದ್ದೆ ಬಸ್ತಿ ಮಠದ ಪ.ಪೂ. ಶ್ರೀಗಳವರ ಮಾರ್ಗದರ್ಶನ ಮತ್ತು ಪಾವನಸಾನ್ನಿಧ್ಯದಲ್ಲಿ ಜರುಗಿತು. ಮೈಸೂರಿನ ಪ್ರಕಾಶ್ ದಂಪತಿಗಳು ಎಲ್ಲ ಕಾರ್ಯಕ್ರಮಗಳ ಸೇವಾರ್ಥದಾರರಾಗಿದ್ದರು.

## ಮುನಿರಾಜ ರೆಂಜಾಳರಿಗೆ ತ್ರೈಲೋಕ್ಯ ಭೂಷಣ ಬಿರುದು



**ಜಾರ್ಖಂಡ್** : ಶ್ರೀ ಸಮ್ಮೇದ ಶಿಖರ್ಜಿಯಲ್ಲಿ ಪ.ಪೂ. ಆಚಾರ್ಯ ಶ್ರೀ 108 ವೈರಾಗ್ಯ ನಂದಿ ಮುನಿ ಮಹಾರಾಜರು ಹಾಗೂ ಪ.ಪೂ. 108 ಮಹಿಮಾ ಸಾಗರ ಮುನಿಮಹಾರಾಜರ ಪಾವನ ಸಾನ್ನಿಧ್ಯದಲ್ಲಿ ಕಾರ್ಕಳದ **ಮುನಿರಾಜ ರೆಂಜಾಳರವರಿಗೆ 'ತ್ರೈಲೋಕ್ಯ ಭೂಷಣ'** ಎಂಬ ಬಿರುದನ್ನು ನೀಡಿ ಗೌರವಿಸಲಾಯಿತು.

## ಎ.ಪಿ. ಕುಮಾರ್‌ಜೈನ್‌ರವರಿಗೆ ಕೆಂಗಲ್ ಹನುಮಂತಯ್ಯ ರಾಜ್ಯ ಪ್ರಶಸ್ತಿ



**ಬೆಂಗಳೂರು** : ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ ಕೆಂಗಲ್ ಹನುಮಂತಯ್ಯ ರಾಜ್ಯ ಪ್ರಶಸ್ತಿಯನ್ನು ಭದ್ರಾವತಿಯ **ಎ.ಪಿ. ಕುಮಾರ್‌ಜೈನ್**‌ರವರಿಗೆ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷರಾದ ನಾಡೋಜ ವೊಡೆ ಪಿ. ಕೃಷ್ಣರವರು ಹಾಗೂ ಸಂಸ್ಥೆಯ ಅಧ್ಯಕ್ಷರಾದ ವಿಜಯ ಸಮರ್ಥರವರು ಪ್ರದಾನ ಮಾಡಿದರು. ಕುಮಾರ್‌ರವರು ಕನ್ನಡ ಸಾಹಿತ್ಯ ಪರಿಷತ್ತಿನ ಭದ್ರಾವತಿ ತಾಲೋಕು ಅಧ್ಯಕ್ಷರಾಗಿ, ಭಾರತೀಯ ಜೈನ್‌ಮಿಲನ್–ಭದ್ರಾವತಿ ಶಾಖೆಯ ಸ್ಥಾಪಕ ಅಧ್ಯಕ್ಷರಾಗಿ, ಭಾರತ ಸೇವಾದಳ ಜಿಲ್ಲಾ ಸಮಿತಿ ಸದಸ್ಯರಾಗಿ, ಪ್ರಾಣಿದಯಾ ಸಂಸ್ಥೆಯ ಜಿಲ್ಲಾ ಸಮಿತಿ ಸದಸ್ಯರಾಗಿ ಜೈನ ಅಧ್ಯಯನ ಸಂಸ್ಥೆಯ ಜಿಲ್ಲಾಧ್ಯಕ್ಷರಾಗಿ ಹಲವಾರು ಸಾಹಿತ್ಯಕ ಸಾಮಾಜಿಕ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

## ಜೈನರಗುತ್ತಿ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರ



**ಅಡಗೂರು** : ಸಮೀಪದ ಜೈನರಗುತ್ತಿ ಭ. ಶ್ರೀ 1008 ಶೀತಲನಾಥ ಭಗವಾನ್ ದಿಗಂಬರ ಜೈನ ಅತಿಶಯ ಕ್ಷೇತ್ರ ಚಾರಿಟೇಬಲ್ ಟ್ರಸ್ಟ್ (ರಿ.) ವತಿಯಿಂದ ಹಾಗೂ ಜಿನಧರ್ಮ ಪ್ರಭಾವಕ ಯುವಸಂತ ಪ.ಪೂ. ಮುನಿಶ್ರೀ 108 ವೀರಸಾಗರ ಮುನಿ ಮಹಾರಾಜರ ಮಾರ್ಗದರ್ಶನದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. 10ನೇ ತರಗತಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇಕಡಾ 90% ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಕರ್ನಾಟಕದ ವಿದ್ಯಾರ್ಥಿಗಳು jainaragutti108@gmail.comಗೆ ತಮ್ಮ ವಿವರಗಳನ್ನು ಕಳುಹಿಸಿ ಈಮೇಲ್ ಮೂಲಕ ಅರ್ಜಿ ಪಡೆದು **26–01–2024ರ** ಒಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ : ನಾಗೇಂದ್ರ ಪ್ರಸಾದ್ – 8095404018 / 9481669561

## ಏಚಿಗನಹಳ್ಳಿಯಲ್ಲಿ ವಾರ್ಷಿಕ ಪೂಜೆ

**ನಂಜನಗೂಡು** : ತಾಲೂಕಿನ ಏಚಿಗನಹಳ್ಳಿಯಲ್ಲಿರುವ ಅತ್ಯಂತ ಪ್ರಾಚೀನವಾದ ಭ. ಶ್ರೀ 1008 ನೇಮಿನಾಥ ತೀರ್ಥಂಕರರ ಬಸದಿಯಲ್ಲಿ ಕನಕಗಿರಿ, ಕಂಬದಹಳ್ಳಿ ಹಾಗೂ ಆರತಿಪುರ ಶ್ರೀಮಠಗಳ ಪ.ಪೂ. ಭಟ್ಟಾರಕ ಶ್ರೀಗಳವರ ಪಾವನ ಸಾನ್ನಿಧ್ಯದಲ್ಲಿ ವಾರ್ಷಿಕ ಪೂಜಾ ಮಹೋತ್ಸವ ಹಾಗೂ ಧಾರ್ಮಿಕ ಸಭೆ ಜರುಗಲಿದೆ. ಕೆ. ಆದಿರಾಜಯ್ಯನವರು ಅಧ್ಯಕ್ಷತೆ ವಹಿಸಲಿದ್ದಾರೆ.




## ಪದ್ಮಾಂಬ ಟ್ರಸ್ಟ್‌ನಿಂದ 92 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣೆ


**ಬೆಂಗಳೂರು** : ಪದ್ಮಾಂಬ ಟ್ರಸ್ಟ್‌ನಿಂದ 2023–24ನೇ ಸಾಲಿನಲ್ಲಿ ಒಟ್ಟು 92 ವಿದ್ಯಾರ್ಥಿಗಳಿಗೆ 6,74,00 ರೂಗಳನ್ನು ವಿದ್ಯಾರ್ಥಿ ವೇತನವಾಗಿ ನೀಡಲಾಗಿದೆ ಎಂದು ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಕೆ.ಪಿ. ಅಶೋಕ್‌ಕುಮಾರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಭಯಚಂದ್ರ ಜೈನ್‌ರವರಿಗೆ ಕಲ್ಪವೃಕ್ಷ ಪ್ರಶಸ್ತಿ



**ಮೂಡುಬಿದಿರೆ, ನ. 18** : ಎಂಸಿಎಸ್ ಬ್ಯಾಂಕಿನ 2023ನೇ ಸಾಲಿನ ಸಹಕಾರಿ ಸಪ್ತಾಹದಲ್ಲಿ ಪ್ರತಿಷ್ಠಿತ **'ಕಲ್ಪವೃಕ್ಷ ಪ್ರಶಸ್ತಿ'**ಯನ್ನು ಮಾಜಿ ಸಚಿವರಾದ ಶ್ರೀ **ಕೆ.ಅಭಯಚಂದ್ರ ಜೈನ್** ಅವರಿಗೆ ಪ್ರದಾನ ಮಾಡಲಾಯಿತು. ಮೂಡಬಿದ್ರಿಯಲ್ಲಿರುವ ಎಂಸಿಎಸ್ ಬ್ಯಾಂಕಿನ ಕಲ್ಪವೃಕ್ಷ ಸಭಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನೆರವೇರಿತು.

## ರತ್ನರವರಿಗೆ ಕರ್ನಾಟಕ ಸಂಘದ ರಾಜ್ಯೋತ್ಸವ ಪ್ರಶಸ್ತಿ



**ಮಂಡ್ಯ, ನ. 26** : ನಿವೃತ್ತ ದೈಹಿಕ ಶಿಕ್ಷಕಿ ಕೆ.ಜೆ. ರತ್ನರವರಿಗೆ ಮಂಡ್ಯದ ಕರ್ನಾಟಕದ ಸಂಘವು ರಾಜ್ಯೋತ್ಸವ ಪ್ರಶಸ್ತಿ–2023 ನೀಡಿ ಗೌರವಿಸಿದೆ. ರಾಷ್ಟ್ರಮಟ್ಟದ ಕಬಡ್ಡಿ ಆಟಗಾರ್ತಿಯಾಗಿ, ರಾಜ್ಯಮಟ್ಟದ ಕಬಡ್ಡಿ ತೀರ್ಪುಗಾರರಾಗಿ, ರಾಷ್ಟೀಯ ಜನಪದ ನೃತ್ಯಗಾರ್ತಿಯಾಗಿ, ಭಾರತ ಸೇವಾದಳ ಕಾರ್ಯಕರ್ತೆಯಾಗಿ, ಭಾರತ ಸ್ಕೌಟ್–ಗೈಡ್ಸ್‌ನ ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿ ಸೇವೆ ಸಲ್ಲಿಸಿದ್ದಾರೆ. ಹವ್ಯಾಸಿ ರಂಗಭೂಮಿ ಕಲಾವಿದೆಯಾಗಿ ಹಲವು ನಾಟಕಗಳಲ್ಲಿ ಮನೋಜ್ಞ ಅಭಿನಯ ನೀಡಿದ್ದಾರೆ.

## ಉತ್ತಮ ರಾವ್‌ಸಾಹೇಬ ಪಾಟೀಲರವರಿಗೆ ಸಹಕಾರ ರತ್ನ ಪ್ರಶಸ್ತಿ



**ವಿಜಯಪುರ, ನ. 20** : ಶ್ರೀ **ಉತ್ತಮ ರಾವಸಾಹೇಬ ಪಾಟೀಲ** ಅವರು ಕರ್ನಾಟಕ ಸರ್ಕಾರದ ಪ್ರತಿಷ್ಠಿತ **'ಸಹಕಾರ ರತ್ನ'**ಪ್ರಶಸ್ತಿಗೆ ಭಾಜನರಾಗಿದ್ದು, ವಿಜಾಪುರದಲ್ಲಿ ಜರುಗಿದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ಡಾ. ಜಯಪದ್ಮರವರಿಗೆ ಡಾ. ರಾಧಾಕೃಷ್ಣನ್ ಪ್ರಶಸ್ತಿ



**ಬೆಂಗಳೂರು** : ಅಲೈಗಿನಿ ರೈಸಿಂಗ್ ಫೌಂಡೇಶನ್ ಟ್ರಸ್ಟ್ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಶೈಕ್ಷಣಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಅನನ್ಯ ಸಾಧನೆಗೈದ **ಡಾ. ಹೆಚ್.ಡಿ. ಜಯಪದ್ಮಾಕುಮಾರ್**‌ರವರಿಗೆ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಪ್ರಶಸ್ತಿಯನ್ನು ಖ್ಯಾತ ಗಾಯಕರಾದ ಶಶಿಧರ ಕೋಟೆಯವರು ಪ್ರದಾನ ಮಾಡಿದರು. ಡಾ. ಜಯಪದ್ಮರವರು ಹಲವಾರು ಪುರಸ್ಕಾರ, ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ ಹಾಗೂ ಮಂಡ್ಯದಲ್ಲಿ ಜರುಗಿದ ರಾಜ್ಯ ಕವಿ ಕಾವ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.

## ಪದ್ಮಾವತಿ ವ. ಹೋಳಗಿ ಗ್ರಾ.ಪಂ. ಅಧ್ಯಕ್ಷೆ




**ಹಾವೇರಿ** : ತಾಲೂಕಿನ ಕೋಳೂರು ಗ್ರಾಮ ಪಂಚಾಯಿತಿಗೆ ಅಧ್ಯಕ್ಷೆಯಾಗಿ **ಪದ್ಮಾವತಿ ವಜ್ರಕುಮಾರ ಹೋಳಗಿ** ಅವರು ಆಯ್ಕೆಯಾಗಿದ್ದಾರೆ.

## ಜೈನ ವಧೂ ವರರ ಸಮಾವೇಶ

**ಬೆಂಗಳೂರು** : ಜೈನ ವಧೂ–ವರರ 24ನೇ ವಾರ್ಷಿಕ ಸಮಾವೇಶವು **21ನೇ ಜನವರಿಯಲ್ಲಿ** ಬೆಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಲ್ಯಾಣ ಮಂಟಪದಲ್ಲಿ ಜರುಗಲಿದೆ. **14 ಜನವರಿ** ಒಳಗಾಗಿ ಉಚಿತ ನೋಂದಣಿ ಮಾಡಿಸಬಹುದು. ಹೆಚ್ಚಿನ ವಿವರಗಳಿಗೆ : 9901555038, 9886391945

ಬಾ ಭವ್ಯ ಬೆಳಗೂಳ ಬಸದಿಗೆ

# ಜಿನಧರ್ಮ ವೈಭವದ ಪ್ರತೀಕ ಜಿನನಾಥಪುರದ ಜೈನ ಬಸದಿ



ಜಿನ್ನನಾಥಪುರದಲ್ಲಿನ ಜಿನಧರ್ಮದ ವೈಭವದ ಪ್ರತೀಕವಾಗಿರುವ **ಶಾಂತಿನಾಥ ತೀರ್ಥಂಕರ ಬಸದಿಯು** ಚನ್ನರಾಯ–ಪಟ್ಟಣ ತಾಲ್ಲೂಕಿನ, ಶ್ರವಣಬೆಳಗೊಳದ ಚಿಕ್ಕಬೆಟ್ಟಕ್ಕೆ ಉತ್ತರ–ದಲ್ಲಿರುವ ಒಂದು ಹಳ್ಳಿ–ಜಿನನಾಥಪುರದಲ್ಲಿ ಇದೆ. ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಹೊಯ್ಸಳ ವಿಷ್ಣುವರ್ಧನನ ಹಿರಿಯ ದಂಡನಾಯಕನಾಗಿದ್ದ ಗಂಗರಾಜ ಬೆಳಗೊಳ ತೀರ್ಥಕ್ಕೆ ಹೊಂದಿಕೊಂಡಂತೆ ಜಿನನಾಥಪುರವೆಂಬ ಹಳ್ಳಿಯನ್ನು ಸ್ಥಾಪನೆಮಾಡಿದನೆಂದು ಆ ಹಳ್ಳಿಯಲ್ಲಿ ತನ್ನ ಇಡೀ ಕುಟುಂಬವನ್ನು ನೆಲೆಗೊಳಿಸಿದನೆಂದು ಶಾಸನಗಳು ಉಲ್ಲೇಖಿಸುತ್ತದೆ.

ಇಲ್ಲಿನ ಶಾಂತಿನಾಥ ಬಸದಿಯು ಜಿನ್ನಾಥಪುರದ ಪಶ್ಚಿಮದ ಅಂಚಿನಲ್ಲಿದೆ. ಈ ಬಸದಿಯು ಹೊಯ್ಸಳರ ಕಾಲದ ಕಲಾಪೂರ್ಣ ಬಸದಿಗಳಲ್ಲಿ ಪ್ರಮುಖವಾದದ್ದು. ಹೊಯ್ಸಳ ವಾಸ್ತುಶಿಲ್ಪದ ಮಾದರಿ, ಬಸದಿಯ ಹೊರಪ್ರಕಾರದಲ್ಲಿನ ಕುಸುರಿ ಕೆತ್ತನೆಯ ಕಲಾಶಿಲ್ಪಗಳ ಉನ್ನತ ಶಿಲ್ಪ ಸೌಂದರ್ಯವನ್ನೊಳಗೊಂಡ ಕರ್ನಾಟಕದ ಏಕೈಕ ಬಸದಿ ಎನ್ನಲಾಗಿದೆ.

ವಿಷ್ಣುವರ್ಧನನ ದಂಡನಾಯಕನಾಗಿದ್ದ ವಸುದೈವ ಬಾಂಧವನೆಂದೇ ಹೆಸರಾಗಿದ್ದ ರೇಚಿಮಯ್ಯ ದಂಡನಾಯಕನು ಕ್ರಿ.ಶ.1117ರಲ್ಲಿ ನಿರ್ಮಿಸಿದ ಎಂದು ಬಸದಿಯ ಒಳಭಾಗದಲ್ಲಿ ಇರುವ ಶಾಂತಿನಾಥ ತೀರ್ಥಂಕರರ ಪೀಠದಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಕುಳಿತ ಭಂಗಿಯಲ್ಲಿರುವ ಬಸದಿಯ ಅಧಿನಾಯಕ ಶಾಂತಿನಾಥ ತೀರ್ಥಂಕರರ ವಿಗ್ರಹ ಈ ಬಸದಿಯ ಮುಖ್ಯ ಅಕರ್ಷಣೆ.



ಬಳಪದ ಕಲ್ಲಿನಲ್ಲಿ ಹೊಯ್ಸಳ ಶೈಲಿಯಲ್ಲಿರುವ ಬಸದಿಯನ್ನು ಕಟ್ಟಿಸಿದವನು ಮೊದಲು ಕಲಚೂರ್ಯರಲ್ಲಿ ಮಂತ್ರಿಯಾಗಿದ್ದು ಅನಂತರ ಹೊಯ್ಸಳ ರಾಜ, ಇವ್ಮಡಿ ಬಲ್ಲಾಳನಲ್ಲಿ ದಂಡನಾಯಕನಾಗಿದ್ದ ವಸುಧೈವಬಾಂಧವ ರೇಚಣ ಬಸದಿಯನ್ನು ಮಾಡಿಸಿದನೆಂದು ಇಲ್ಲಿನ ಗರ್ಭಗೃಹದಲ್ಲಿ ಅವನು ಶಾಂತಿನಾಥ ತೀರ್ಥಂಕರರ ಪ್ರತಿಷ್ಠೆಯನ್ನು ಮಾಡಿ ತನ್ನ ಗುರುಗಳಾದ ಸಾಗರಣಂದಿ ಸಿದ್ಧಾಂತ ದೇವರಿಗೆ ಬಿಟ್ಟುದಾಗಿ ಗರ್ಭಗೃಹ ಮೂರ್ತಿಯ ಪೀಠದ ಮೇಲಿನ ಶಾಸನ ತಿಳಿಸುತ್ತದೆ.

ಬಸದಿಯ ವಿನ್ಯಾಸ ಮತ್ತು ಶಿಲ್ಪಕಲೆಯು ಮಹತ್ವದ ಶಿಲ್ಪ ಸೌಂದರ್ಯಕ್ಕೆ ಹೆಸರಾಗಿದೆ. ಒಂದೇ ಗರ್ಭಗುಡಿಯನ್ನು ಹೊಂದಿರುವ ಈ ಬಸದಿಯನ್ನು ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದೆ.ಹೀಗೆ ಹೊಯ್ಸಳ ಶೈಲಿಯಲ್ಲಿ ಜಗತಿಯ ಮೇಲೆ ನಿರ್ಮಾಣ ಮಾಡಿದ ಏಕೈಕ ಬಸದಿ ಎಂಬ ಹಿರಿಮೆ ಈಬಸದಿಗಿದೆ.ತಲವಿನ್ಯಾಸದ ಹೊರ ಆಕಾರವನ್ನೇ ಅನುಸರಿಸುವ ಜಗತಿಯ ಮೇಲೆ ನಿರ್ಮಿತವಾಗಿರುವ ಈ ಬಸದಿಗೆ ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳಿವೆ. ಸುಂದರವಾದ ಈ ಬಸದಿಯ ಗರ್ಭಗೃಹದ ಮೇಲೆ ಅಷ್ಟೇ ಸುಂದರವಾಗಿದ್ದ ಗೋಪುರವೂ ಇದ್ದಿರಬೇಕು. ಆದರೆ ಈಗ ಅದರ ಕುರುಹುಗಳೇನೂ ಉಳಿದು ಬಂದಿಲ್ಲ. ತಲವಿನ್ಯಾಸದ ಚೌಕಾಕಾರವಾಗಿದ್ದರೂ ಹೊರಭಿತ್ತಿಯನ್ನು ಕಚ್ಚು ಕಚ್ಚಾಗಿ ಹಲವು ಮುಖಗಳನ್ನಾಗಿ ವಿಭಾಗಿಸಿ ಈ ಮುಖಗಳು ಮುಂಚಾಚಿಯೋ ಒಳಸರಿದೋ ಇರುವಂತೆ ನಿರ್ಮಿಸಿದೆ. ಮುಂಚಾಚಿದ ಮುಖಗಳ ಮೇಲೆ ಅರೆಗಂಬಗಳ ನಡುವೆ ಅರೆಮಂಟಪವಿದೆ. ಅದರ ಮೇಲೆ ಮುತ್ತಿನ ತೋರಣವನ್ನುಳ್ಳ ಮೇಲೆ 5 ಅಂತಸ್ತಿನ ಅರೆ ಗೋಪುರಗಳಿವೆ. ಮಂಟಪಗಳಲ್ಲಿ ಜಿನನ ಅಥವಾ ಯಕ್ಷ ಯಕ್ಷಿಯರ ಮೂರ್ತಿಗಳುಂಟು. ಒಳಸರಿದ ಮುಖಗಳಲ್ಲಿ ಅರೆಗಂಬದ ಮೇಲೆ ಅರೆಗೋಪುರ, ಅದರ ಮೇಲೆ ಕೀರ್ತಿಮುಖ, ಕೀರ್ತಿಮುಖದ ಎರಡು ಕೋರೆಗಳಿಂದಲೂ ಇಳಿಬಿದ್ದಿರುವ ಬಳ್ಳಿಸುರುಳಿಗಳಿವೆ. ಅರೆಗಂಬದ ಮುಂದೆ ಮೂರ್ತಿಶಿಲ್ಪವಿದೆ. ಒಂದೊಂದು ದಿಕ್ಕಿನ ಗೋಡೆಯ ಮಧ್ಯದ ಅರೆಮಂಟಪದ ಇಕ್ಕೆಲಗಳಲ್ಲೂ ಲತಾವಿತಾನಗಳ ಕೆಳಗೆ ಹಲವು ಭಂಗಿಗಳಲ್ಲಿರುವ, ಗೀತ ವಾದ್ಯ ನೃತ್ಯಗಳಲ್ಲಿ ನಿರತರಾದ ಗಂಡು ಹೆಣ್ಣುಗಳನ್ನೋ ಯಕ್ಷ ಯಕ್ಷಿಯರನ್ನೋ ಸರಸ್ವತಿ, ಬ್ರಹ್ಮ, ಮೋಹಿನಿ, ಮನ್ಮಥರನ್ನೋ ಕಾಣಬಹುದು. ನಾಟ್ಯದ ಕೆಲವು ಭಂಗಿಗಳಂತೂ ಮೋಹಕವಾಗಿವೆ. ಕಾಲಿಗೆ ಗೆಜ್ಜೆಯ ಪಟ್ಟಿಯೊಂದನ್ನು ಕಟ್ಟಿ ಅರೆಭಂಗಿ ತ್ರಿಭಂಗಿಯಲ್ಲಿರುವ, ಅಕ್ಕಪಕ್ಕದವರ ತಾಳ ಮದ್ದಳೆಯ ಲಯಕ್ಕೆ ಸರಿಯಾಗಿ ಹೆಜ್ಜೆಹಾಕುತ್ತ ಚಾಮರ ಹಾಕುತ್ತಿರುವ ನರ್ತಕನೊಬ್ಬನ ಮೂರ್ತಿಯನ್ನು ಇಲ್ಲಿ ಗಮನಿಸಬಹುದು.

ವಿತಾನಗಳ ಮೇಲೆ ಅರೆಗಂಬಗಳ ನಡುವೆ ಸುರುಳಿಸುರುಳಿಯಾಗಿ ಅಲೆಯಲೆಯಾಗಿ ಮೇಲೆ ಹಬ್ಬಿ ಹೋಗುತ್ತಿರುವಂತೆ ಬಿಡಿಸಿರುವ ಬಳ್ಳಿಗಳು ಇಲ್ಲಿಯ ವೈಶಿಷ್ಟ್ಯ. ಇವನ್ನು ಹೊಯ್ಸಳ ಶಿಲ್ಪದಲ್ಲೂ ಅಪರೂಪವೆನಿಸುವಷ್ಟು ಅತ್ಯಂತ ಸೂಕ್ಷ್ಮವಾಗಿಯೂ ನವುರಾಗಿಯೂ ಬಿಡಿಸಲಾಗಿದೆ. ಮೂವತ್ತಕ್ಕೂ ಹೆಚ್ಚು ಅರೆಗೋಪುರಗಳಲ್ಲಿ ಒಂದೊಂದೂ ಒಂದೊಂದು ಬಗೆಯಾಗಿದೆ. ಮಣಿತೋರಣಗಳಿಂದ, ಕೀರ್ತಿ ಮುಖಗಳ ಸಾಲಿನಿಂದ, ಬಳ್ಳಿಸುರುಳಿಯ ಪಟ್ಟಿಕೆಯಿಂದ ಅಲಂಕೃತವಾದ ತಿರುಗಣೆಯಲ್ಲಿ ಕಡೆದ ಹೊಯ್ಸಳ ರೀತಿಯ ಕಂಬಗಳು ನವರಂಗದ ಒಳಹೋಗುತ್ತಿದ್ದಂತೆಯೇ ಕಣ್ಣನ್ನು ಸೆಳೆಯುತ್ತವೆ. ಒಂದು ಕಂಬವನ್ನು ಮಾತ್ರ ಪೂರ್ತಿಗೊಳಿಸಿಲ್ಲ. ನವರಂಗದ ಎರಡು ಕಡೆಯೂ, ಎದುರುಬದುರಾಗಿ, ಗೋಡೆಗೆ ಸೇರಿದಂತೆ ಇರುವ, ಕುಸುರಿ ಕೆಲಸದಿಂದ, ಹಲವು ಆಕೃತಿಗಳಲ್ಲಿರುವ ಭುವನೇಶ್ವರಿಗಳಲ್ಲಿಯೂ ಶಿಲ್ಪಚತುರತೆಯನ್ನು ಕಾಣಬಹುದು. ಗರ್ಭಗೃಹದಲ್ಲಿರುವ ಗಂಭೀರಮುಖ ಮುದ್ರೆಯುಳ್ಳ ನೇರ ನಿಲುವಿನ ಶಾಂತಿನಾಥನ ಮೂರ್ತಿ ಸುಂದರವಾದ್ದು. ಒಟ್ಟಿನಲ್ಲಿ ಶಾಂತಿನಾಥ ಬಸದಿಯಷ್ಟು ಸೂಕ್ಷ್ಮಾಲಂಕರಣದಿಂದ ಕೂಡಿದ ಬಸದಿ ಕರ್ನಾಟಕದಲ್ಲೇ ಬೇರೊಂದು ಇಲ್ಲವೆಂದು ಹೇಳಬಹುದು.

ಜಿನಭಕ್ತರಿಗೆ ಭಕ್ತಿಯ ಪರಾಕಾಷ್ಠೆಯೆಡೆಗೆ ಕೊಂಡೊಯ್ಯಬಲ್ಲ,ಸಂಶೋಧಕರಿಗೆ ಆಸಕ್ತಿ ಕೆರಳಿಸಬಲ್ಲ, ಶಿಲ್ಪಾಸಕ್ತರಿಗೆ ಸೌಂದರ್ಯದ ಔತಣ ನೀಡಬಲ್ಲ, ಪ್ರವಾಸಿಗರಿಗೆ ಕಣ್ಮನ ತಣಿಸಬಲ್ಲ ಈ ಜಿನ ಬಸದಿಯನ್ನು ಒಮ್ಮೆ ಎಲ್ಲರು ನೋಡಬೇಕು ಮನದಣಿದು ಮೈಮರೆಯಬೇಕು. ಶ್ರವಣಬೆಳಗೊಳಕ್ಕೆ ಬಂದವರೊಮ್ಮೆ ಇಲ್ಲಿಗೂ ಹೋಗಿ ಬನ್ನಿ ರೇಚಣ್ಣನ ಬಾಂಧ್ಯವದ ಬಸದಿಯನ್ನು ಕಂಡು ಭವ್ಯರಾಗಿ ಬನ್ನಿ.

**ಲೇಖನ : ವೀರೇಂದ್ರ ಬೇಗೂರು, ಶ್ರವಣಬೆಳಗೊಳ**

## ವಿಶೇಷ ದಿನಗಳು

**16.12.2023 ಶನಿವಾರ : ಧನುರ್ಮಾಸ ಪ್ರಾರಂಭ**

**20.12.2023 ಬುಧವಾರ : ಅಷ್ಟಮಿ**

**22.12.2023 ಶುಕ್ರವಾರ : ಭ. ಶ್ರೀ ಅರನಾಥ ತೀರ್ಥಂಕರರ ದೀಕ್ಷಾ ಕಲ್ಯಾಣ**

**23.12.2023 ಶನಿವಾರ : ಭ. ಶ್ರೀ ನಮಿನಾಥ ತೀರ್ಥಂಕರರ ಕೇವಲಜ್ಞಾನ ಕಲ್ಯಾಣ**

**25.12.2023 ಸೋಮವಾರ : ಚತುರ್ದಶಿ**

**26.12.2023 ಮಂಗಳವಾರ : ಹುಣ್ಣಿಮೆ**

## ಜೈನ್ ಕ್ವಿಜ್

1) ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಗಂಗಸಮುದ್ರವೆಂದು ಪ್ರಾಚೀನ ಹೆಸರು ಇರುವ ಕೆರೆ ಯಾವುದು?

2) ಶ್ರವಣಬೆಳಗೊಳದಲ್ಲಿರುವ ಮಾನಸ್ತಂಭಗಳೆಷ್ಟು?

3) ವಿಜಯ ಪಾರ್ಶ್ವನಾಥ ಬಸದಿ ಇರುವ ಕ್ಷೇತ್ರ ?

4) ದಿಕ್ಕುಗಳನ್ನೇ ಸೀಮೆಯಾಗಿಟ್ಟುಕೊಂಡು ಪಾಲಿಸುವ ಶ್ರಾವಕರ ವ್ರತ?

5) ಮೂಡಬಿದಿರೆಯ ಸಾವಿರ ಕಂಬದ ಬಸದಿಗೆ ಇರುವ ಇನ್ನೊಂದು ಹೆಸರು?

ಈ ಮೇಲಿನ ಪ್ರಶ್ನೆಗಳಿಗೆ ದಿನಾಂಕ 25–12–2023ರ ಒಳಗೆ ದೂರವಾಣಿ ಸಂಖ್ಯೆ : **8660118443** ಗೆ ವಾಟ್ಸಪ್ ಮೂಲಕ ಸರಿ ಉತ್ತರಗಳನ್ನು ತಮ್ಮ ಹೆಸರು, ವಿಳಾಸದೊಂದಿಗೆ ಕಳುಹಿಸುವುದು.

ಸರಿ ಉತ್ತರ ಕಳುಹಿಸಿದ ಮೊದಲ 5 ಜನರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಹಿಂದಿನ ಸಂಚಿಕೆಯ ಉತ್ತರಗಳು :

1) ಜ್ಞಾನದ ಭೇದವಾಗಿದೆ. 2) ಸುವಿಧಿನಾಥ
3) ಆಚಾರ್ಯ ಸಮಂತಭದ್ರರು 4) ಕಾಮದೇವ/ಪ್ರಥಮ ಮನ್ಮಥ
5) ಪಂ. ಜವಾಹರಲಾಲ್ ನೆಹರೂ

ಮೊದಲು ಸರಿ ಉತ್ತರ ಬರೆದವರು :

1) ಶ್ರುತ ವನಕುದರಿ, ಹುಬ್ಬಳ್ಳಿ
2) ಶೋಭಾ ಬಸ್ತಿ, ಧಾರವಾಡ
3) ಅಲಕಾನಂದ ಪಾರ್ಶ್ವನಾಥ ಜೈನ್, ಬೆಂಗಳೂರು
4) ಪ್ರಮೀಳಾ ಪ್ರಕಾಶ್, ಮೈಸೂರು
5) ಪದ್ಮಿನಿ ಜ್ವಾಲಕುಮಾರ್, ಬೆಂಗಳೂರು.

**ಇವರುಗಳಿಗೆ ಶುಭಾಷಯಗಳು**

## ಜಿನ ಪದಬಂಧ–07

**ಎಡದಿಂದ ಬಲಕ್ಕೆ**

1. ಮುನಿಗಳಿಗೆ ಮಹಾವ್ರತವಾದರೆ, ಶ್ರಾವಕರಿಗೆ? (4)
3. ಮಹಾಮಂತ್ರವನ್ನು ಕೊನೆಯಲ್ಲಿ ಧೀರ್ಘಮಾಡಿ (4)
5. ಸಾಂಗತ್ಯ ಕವಿ ತಿರುಗಿದ್ದಾನೆ (4)
7. ವ್ರತಾಚರಣೆಯ ದಿವಸ (4)
9. ಭವಿಷ್ಯತ್‌ಕಾಲದ 7ನೇ ತೀರ್ಥಂಕರ (4)
11. ಉಪವಾಸವನ್ನು ಹೆಚ್ಚಿಸುತ್ತಾ ಹೋಗುವ ತಪೋಋದ್ಧಿಗಳಲ್ಲಿ ಒಂದು (4)
13. ಪುಷ್ಪದಂತ ತೀರ್ಥಂಕರರ ಜನ್ಮನಗರ (3)
14. ಸೌಧರ್ಮೇಂದ್ರನ ಪತ್ನಿ (2)
15. ದಶಧರ್ಮಗಳಲ್ಲಿ ಒಂದು (4)

| | | | | | | | | |
|---|---|---|---|---|---|---|---|---|
| 1 | | | 2 | ■ | 3 | | | 4 |
| | ■ | ■ | | ■ | | ■ | ■ | |
| | ■ | ■ | | ■ | | ■ | ■ | |
| 5 | 6 | | | ■ | 7 | | 8 | |
| ■ | | ■ | ■ | ■ | ■ | ■ | | ■ |
| 9 | | | 10 | ■ | 11 | | | 12 |
| | ■ | ■ | | ■ | | ■ | ■ | |
| | ■ | ■ | 13 | | | ■ | ■ | ■ |
| 14 | | ■ | | ■ | 15 | | | |

**ಮೇಲಿನಿಂದ ಕೆಳಕ್ಕೆ**

1. ಆಚಾರದಲ್ಲಿ ಆಕಾರವನ್ನು ತೆಗೆದು ಅತಿಮಾಡಬಾರದು (4)
2. ಪಂಚಾಚಾರಗಳಲ್ಲಿ ಒಂದು (4)
3. ದಶಲಕ್ಷಣ ಪರ್ವ ತಿರುಗಿದೆ (4)
4. ಅಂತಿಮ ತೀರ್ಥಂಕರರ ಹೆಸರಿನ ಕ್ಷೇತ್ರ ಈ ರಾಜ್ಯದಲ್ಲಿದೆ. (4)
6. ಭ. ಪದ್ಮಪ್ರಭ ತೀರ್ಥಂಕರರ ಲಾಂಛನ (3)
8. ದಿಕ್ಕುಗಳ ಪರಿಮಿತಿ ಮಾಡಿಕೊಂಡು ವಿಹಾರ ಮಾಡುವ ಸಂಕಲ್ಪದ ವ್ರತ (3)
9. ಭ.ಕುಂಥುನಾಥ ತೀರ್ಥಂಕರರ ವಂಶ (4)
10. 2 ಇಂದ್ರಿಯಗಳಿಂದ ಹಿಡಿದು 5 ಇಂದ್ರಿಯಗಳನ್ನು ಪಡೆದಿರುವ ಜೀವ (4)
11. ಕಲ್ಯಾಣಕಾರಕ ಆಯುರ್ವೇದ ಗ್ರಂಥ ರಚಿಸಿರುವವರು (4)
12. ಇಹದಲ್ಲಿರುವವರು ಇದನ್ನು ಅಪೇಕ್ಷಿಸಬೇಕು (2)

ರಚನೆ : **ಎ.ಸಿ.ಇಂದಿರಾ ಜಯಕುಮಾರ್, ಶ್ರವಣಬೆಳಗೊಳ**

**ಜಿನ ಪದಬಂಧ–06ರ ಉತ್ತರಗಳು**

**ಎಡದಿಂದ ಬಲಕ್ಕೆ** : 1) ಲಕ್ಷ್ಮಿದೇವಿ 2) ಆಸ್ರವ 4) ಅಜ್ಞಾನ 6) ಅನಶನ 8) ಪೂರ್ವಧರ 10) ಯಶೋಧರ 12) ದಶಪ್ರಾಣ 16) ಸಮಿತಿ 17) ಚಕ್ಷುಷ್ಮತ 18) ಕರ್ಮಭೂಮಿ

**ಮೇಲಿನಿಂದ ಕೆಳಕ್ಕೆ** : 1) ಲವಣ 2) ವಿನಯ 3) ಆಕಾಶ 5) ಅಪೂರ್ವ 6) ಅತಿಶಯ 7) ನಭಚರ 8) ಪೂಜಾಮದ 9) ರತಿಷೇಣ 11) ಸಮ್ಮೇದ 13) ಪ್ರಾಕೃತ 14) ವ್ರತಿಕ 15) ಪಂಚಮಿ

## ಪ್ರಾಕೃತ ಕಲಿಯಿರಿ ಬಿ) ಸರ್ವನಾಮ

ನಾಮಪದಗಳ ಪುನರಾವರ್ತನೆಯನ್ನು ತಡೆಯಲು ಬಳಸುವ ಪದಗಳನ್ನು ಸರ್ವನಾಮಗಳು ಎಂದು ಕರೆಯಲಾಗುತ್ತದೆ. ಸರ್ವನಾಮಗಳಲ್ಲಿ ಆರು ಪ್ರಕಾರಗಳಿವೆ.

1. **ಪುರುಷವಾಚಕ ಸರ್ವನಾಮಗಳು :** ಮಾತನಾಡುವವರು, ಕೇಳುವವರು ಮತ್ತು ಅನ್ಯ ಪುರುಷರ ಸ್ಥಳದಲ್ಲಿ ಬಳಸಲಾಗುವ ಸರ್ವನಾಮ–ಗಳನ್ನು ಪುರುಷ ಸರ್ವನಾಮಗಳು ಎಂದು ಕರೆಯಲಾಗುತ್ತದೆ. ಪುರುಷವಾಚಕ ಸರ್ವನಾಮಗಳಲ್ಲಿ ಮೂರು ಭೇದಗಳಿವೆ.

ಎ) **ಉತ್ತಮಪುರುಷ :** ಮಾತನಾಡುವವ, ಬರೆಯುವವ ಯಾವ ಸರ್ವನಾಮಗಳನ್ನು ತಮಗಾಗಿ ಪ್ರಯೋಗ ಮಾಡುತ್ತಾರೆ ಅದೇ ಉತ್ತಮ ಪುರುಷವಾಚಕ ಸರ್ವನಾಮಗಳಾಗಿವೆ. ಹಾಗೆ ಅಹಂ, ಹಂ, ಅಮ್ಮಿ,– (ನಾನು) ಅಮ್ಹೇ, ವಯಂ – (ನಾವೆಲ್ಲರು).

ಬಿ) **ಮಧ್ಯಮಪುರುಷ :** ಮಾತನಾಡುವವರು ಹಾಗೂ ಬರೆಯುವವರು ಯಾವ ವ್ಯಕ್ತಿಯೊಂದಿಗೆ ಮಾತನಾಡುತ್ತಾರೆ ಅಥವಾ ಬರೆಯುತ್ತಾರೆ ಅದೇ ಮಧ್ಯಮಪುರುಷ ವಾಚಕ ಸರ್ವನಾಮ ಪದವಾಗಿದೆ. ಹಾಗೆ ತುಂ, ತುಹ, ತುಮೇ – (ನೀವು) ತುಬ್ಭೆ, ತುಮ್ಹೇ, ತುಜ್ಝೆ – (ನೀವೆಲ್ಲರೂ)

ಸಿ) **ಅನ್ಯಪುರುಷ :** ಮಾತನಾಡುವವರು ಮತ್ತು ಕೇಳುವವರು ಬೇರೆ ವ್ಯಕ್ತಿಯ ವಿಷಯದಲ್ಲಿ ಸರ್ವನಾಮ ಸ್ವಲ್ಪ ಹೇಳುತ್ತಾರೆ. ಅವೆಲ್ಲವೂ ಅನ್ಯಪುರುಷವಾಚಕ ಹಾಗೆ – ಸೋ, ಸೆ (ಅವನು ಪುಲ್ಲಿಂಗ) ತೆ–(ಎಲ್ಲರು ಪುಲ್ಲಿಂಗ) ಸಾ (ಅವಳು, ಸ್ತ್ರೀಲಿಂಗ) ತಾ–ಅವಳು, ತಾವೋ – (ಎಲ್ಲ ಸ್ತ್ರೀಲಿಂಗ) ಎಲ್ಲಾ ನಾಮಪದ ಪದಗಳು ಸಹ ಅನ್ಯ ಪುರುಷದ ಅಡಿಯಲ್ಲಿ ಬರುತ್ತವೆ.

(ಮುಂದುವರೆಯಲಿದೆ)

## 5ನೇ ವರ್ಷದ ಪುಣ್ಯಸ್ಮರಣೆ



ಜನನ 16–07–1952 ನಿಧನ 30–12–2018

**ಶ್ರೀಮತಿ ಎಸ್.ಡಿ. ಅನಂತಮಾಲಾ**


ನೀವು ನಮ್ಮನ್ನು ಬೌದ್ಧಿಕವಾಗಿ ಅಗಲಿ 5 ವರ್ಷಗಳಾಯ್ತು. ಅದು ನಮಗೆ 5 ಯುಗಗಳಂತೆ ಭಾಸವಾಗುತ್ತಿದೆ. ನಿಮ್ಮ ನೆನಪು, ಆದರ್ಶ ಜೀವನ ಹಚ್ಚು ಹಸಿರಾಗಿದೆ, ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುತ್ತೇವೆ.

* ಸದಾ ನಿಮ್ಮ ನೆನಪಿನಲ್ಲಿ *

**ಡಾ. ಹೆಚ್.ಎಸ್.ಎಲ್. ಕುಮಾರ್ ಹಾಗೂ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಮತ್ತು ಬಂಧು ಬಳಗ**

**ಪಾಂಡವಪುರ**

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀಮತಿ ಗುಣಮಾಲಶರ್ಮರವರು**


ಜನನ : 02–04–1932 ನಿಧನ : 11–01–2023

ಮೈಸೂರಿನ ಜಿನವಾಣಿಪತ್ರಿಕೆ ಸಂಪಾದಕರಾಗಿದ್ದ ದಿ. ಶ್ರೀ ಎಂ.ಸಿ. ಪದ್ಮನಾಭ ಶರ್ಮರವರ ಧರ್ಮಪತ್ನಿ ಇವರು ದಿನಾಂಕ 01–11–2023 ಬುಧವಾರದಂದು ನಿಧನರಾದರು. ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಕೋರುವವರು

* ದುಃಖತಪ್ತರು *

**ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಸೊಸೆಯಂದಿರು ಮತ್ತು ಕುಟುಂಬ ವರ್ಗದವರು**

## 17ನೇ ವರ್ಷದ ಪುಣ್ಯಸ್ಮರಣೆ



ಜನನ 01–05–1927 ನಿಧನ 14–12–2005

**ಶ್ರೀ ಹೊಂಬಣ್ಣ ಪದ್ಮಪ್ಪ ಬೋಗಾರ**

(ಪಾತ್ರೆ ವ್ಯಾಪಾರಿಗಳು, ರಟ್ಟಿಹಳ್ಳಿ, ಹಾವೇರಿ ಜಿಲ್ಲೆ)

ನೀವು ನಮ್ಮನ್ನು ಬೌದ್ಧಿಕವಾಗಿ ಅಗಲಿ 17 ವರ್ಷಗಳಾಯ್ತು. ಅದು ನಮಗೆ 17 ಯುಗಗಳಂತೆ ಭಾಸವಾಗುತ್ತಿದೆ. ನಿಮ್ಮ ನೆನಪು, ಆದರ್ಶ ಜೀವನ ಹಚ್ಚು ಹಸಿರಾಗಿದೆ, ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುತ್ತೇವೆ.

* ಸದಾ ನಿಮ್ಮ ನೆನಪಿನಲ್ಲಿ *


**ಪತ್ನಿ, ಮಕ್ಕಳು, ಮೊಮ್ಮಕ್ಕಳು, ಮತ್ತು ಬಂಧು ಬಳಗ ರಟ್ಟಿಹಳ್ಳಿ.**

## ಆರ್ಯಿಕಾ ಮಾತಾಜಿಯವರ ವಿಹಾರ



**ಶ್ರವಣಬೆಳಗೊಳ, ಡಿ. 10:** ಪೂ. ಗಣಿನೀ ಆರ್ಯಿಕಾ 105 ಕೀರ್ತಿಮತಿ ಮಾತಾಜಿ ಹಾಗೂ ಪೂ. ಆರ್ಯಿಕಾ 105 ಪ್ರಸನ್ನಮತಿ ಮಾತಾಜಿಯವರ ವಿಹಾರವು ಧರ್ಮಸ್ಥಳ ಮಾರ್ಗವಾಗಿ ಮದ್ಯಪ್ರದೇಶದೆಡೆಗೆ ಪ್ರಾರಂಭಗೊಂಡಿತು. ಪೂ. ಸ್ವಾಮಿಗಳವರು ಅರ್ಘ್ಯ ಸಮರ್ಪಿಸಿ ಬೀಳ್ಕೊಟ್ಟರು.

## ಪ್ರಾಕೃತ ಸಂಸ್ಥೆಯ ಸಂಸ್ಥಾಪನಾ ದಿನ ಹಾಗೂ ಪುಸ್ತಕ ಬಿಡಗಡೆ ಕಾರ್ಯಕ್ರಮ



**ಶ್ರವಣಬೆಳಗೊಳ, ಡಿ. 2:** ಶ್ರೀಧವಲತೀರ್ಥಂನಲ್ಲಿ ಪ್ರಾಚೀನ ಪ್ರಾಕೃತ ಭಾಷೆಯ ಪ್ರಚಾರ–ಪ್ರಸಾರ ಕಾರ್ಯದಲ್ಲಿ ನಿರತವಾಗಿರುವ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯ 31ನೇ ವರ್ಷದ ಸಂಸ್ಥಾಪನಾ ದಿನದ ಅಂಗವಾಗಿ ಪ್ರಾಕೃತ ಭವನದಲ್ಲಿ ಬೆಳಿಗ್ಗೆ ಜಿನವಾಣಿಗೆ ಪಂಚಾಮೃತ ಅಭಿಷೇಕ ಹಾಗೂ ಶ್ರುತಸ್ಕಂಧ ಆರಾಧನೆಯು ನೆರವೇರಿತು. ಮಧ್ಯಾಹ್ನ ಸಂಸ್ಥೆಯ ನಿರ್ದೇಶಕರಾದ ಡಾ. ಎನ್. ಸುರೇಶ್‌ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಜರುಗಿತು. ಸಂಸ್ಥೆಯ ನಿವೃತ್ತ ಪ್ರವಾಚಕಿ ಡಾ. ಸಿ.ಪಿ. ಕುಸುಮಾರವರು ಅನುವಾದಿಸಿರುವ, ಪ್ರಾಕೃತ ರತ್ನ ವಿದ್ಯಾರ್ಥಿಗಳ ಬಳಗ ಪ್ರಕಟಿಸಿರುವ **'ಪ್ರಾಕೃತ ರತ್ನಾಕರ'** ಪುಸ್ತಕವನ್ನು ಸಂಸ್ಥೆಯ ಹಿಂದಿನ ನಿರ್ದೇಶಕರಾದ ಪ್ರೊ. ಜೀವಂಧರಕುಮಾರ ಕೆ. ಹೋತಪೇಟಿರವರು ಬಿಡುಗಡೆಗೊಳಿಸಿದರು. ಕುಲಸಚಿವರಾದ ಲೋಕಕುಮಾರ್‌ರವರು ಅನುವಾದಿಸಿರುವ, ಮೈಸೂರಿನ ಶಾಂತಕಮಲ ಪ್ರಕಾಶನ ಪ್ರಕಟ ಮಾಡಿರುವ **'ಪ್ರಾಕೃತ ಬೋಧ'** ಪುಸ್ತಕವನ್ನು ನಿರ್ದೇಶಕರಾದ ಡಾ. ಎನ್. ಸುರೇಶ್‌ಕುಮಾರ್‌ರವರು ಬಿಡುಗಡೆ ಮಾಡಿದರು.



## ನವರಾತ್ರಿ ಮಂಟಪಗಳ ಜೀರ್ಣೋದ್ಧಾರ



**ಶ್ರವಣಬೆಳಗೊಳ :** ಶ್ರೀಕ್ಷೇತ್ರದಲ್ಲಿದ್ದ 9 ನವರಾತ್ರಿ ಮಂಟಪಗಳಲ್ಲಿ ನವರಾತ್ರಿ ಸಂದರ್ಭದಲ್ಲಿ ಒಂದೊಂದು ಮಂಟಪದಲ್ಲಿ ಜಿನವಾಣಿ ಹಾಗೂ ಜಿನಶಾಸನ ಯಕ್ಷಿಯರ ಉತ್ಸವ ಮೂರ್ತಿಗಳನ್ನು ಇರಿಸಿ ಪೂಜಿಸಲಾಗುತ್ತಿತ್ತು. ಇವುಗಳಲ್ಲಿ 6 ಮಂಟಪಗಳು ಸಂಪೂರ್ಣ ನಾಶವಾಗಿದ್ದು, ಉಳಿದ 3 ಮಂಟಪಗಳು ಶಿಥಿಲಗೊಂಡಿವೆ. ಈಗ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಮೂರು ನವರಾತ್ರಿ ಮಂಟಪಗಳ ಜೀರ್ಣೋದ್ಧಾರ ಕಾರ್ಯ ಪ್ರಾರಂಭಗೊಂಡಿರುತ್ತದೆ.

## ಶ್ರೀಕ್ಷೇತ್ರದಲ್ಲಿ ಕಡೆ ಕಾರ್ತೀಕ ದೀಪೋತ್ಸವ



**ಶ್ರವಣಬೆಳಗೊಳ, ಡಿ. 12:** ಕೊನೆ ಕಾರ್ತೀಕದಂದು ಕಂಬದಹಳ್ಳಿಯ ಪ.ಪೂ. ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಸ್ವಾಮಿಗಳವರು ಹಾಗೂ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ಶ್ರೀಕ್ಷೇತ್ರದಲ್ಲಿ ದೀಪ ಬೆಳಗಿಸಿದರು.

## ಪ್ರಾಕೃತ ಸಂಸ್ಥೆಯ ನಿರ್ದೇಶಕರಾಗಿ ಡಾ. ಎನ್. ಸುರೇಶ್‌ಕುಮಾರ್



**ಶ್ರವಣಬೆಳಗೊಳ, ಡಿ. 1:** ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ. ಎನ್. ಸುರೇಶ್‌ಕುಮಾರ್‌ರವರು ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿ ನಿಯುಕ್ತಿಗೊಂಡಿದ್ದು, ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ ಆಶೀರ್ವಾದ ಪಡೆದು ಅಧಿಕಾರ ಸ್ವೀಕರಿಸಿದರು. ಈ ಹಿಂದೆಯೂ ಕೂಡ ಪ್ರಾಕೃತ ಸಂಸ್ಥೆಯ ನಿರ್ದೇಶಕರಾಗಿ ಡಾ. ಎನ್. ಸುರೇಶ್‌ಕುಮಾರ್‌ರವರು ಕಾರ್ಯನಿರ್ವಹಿಸಿದ್ದಾರೆ. ನಿಕಟಪೂರ್ವ ನಿರ್ದೇಶಕರಾದ ದೆಹಲಿಯ ಪ್ರೊ. ಜಯಕುಮಾರ ಉಪಾಧ್ಯೆಯವರ ಅಧಿಕಾರಾವಧಿ ಸೆಪ್ಟೆಂಬರ್ 30ಕ್ಕೆ ಕೊನೆಗೊಂಡಿತ್ತು.

## ರತ್ನಾಕರವರ್ಣಿ ಭರತೇಶ ವೈಭವ ವಿಚಾರ ಸಂಕಿರಣ



**ಶ್ರವಣಬೆಳಗೊಳ, ಡಿ. 9 :** ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ ಆಶೀರ್ವಾದದೊಂದಿಗೆ ಶ್ರೀಮಠ ಮತ್ತು ಮಂಗಳೂರು ವಿಶ್ವವಿದ್ಯಾಲಯದ 'ಮಹಾಕವಿ ರತ್ನಾಕರವರ್ಣಿ ಅಧ್ಯಯನ ಪೀಠ'ದ ಸಂಯುಕ್ತಾಶ್ರಯದಲ್ಲಿ 'ರತ್ನಾಕರವರ್ಣಿ: ಭರತೇಶ ವೈಭವ ಸಾಂಸ್ಕೃತಿಕ ಅನನ್ಯತೆ' ಎಂಬ ವಿಷಯದ ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಆದಿಕವಿ ಪಂಪ ಸಭಾಂಗಣದಲ್ಲಿ ಆಯೋಜಿತವಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಂಡ್ಯ ಸ್ನಾತಕೋತ್ತರ ಕೇಂದ್ರದ ಹಿರಿಯ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಚಂದ್ರಕಿರಣ್‌ರವರು 'ಜಿನಸೇನಾಚಾರ್ಯರ ಮಹಾಪುರಾಣ, ಪಂಪನ ಆದಿಪುರಾಣದ ಪಾತ್ರಗಳಾದ ಭರತ–ಬಾಹುಬಲಿಯರನ್ನು ಭರತೇಶ ವೈಭವದಲ್ಲಿ ರತ್ನಾಕರವರ್ಣಿಯು ಭಿನ್ನವಾಗಿ ಚಿತ್ರಿಸಿದ್ದಾನೆ. ಭರತೇಶ ವೈಭವವು ಕನ್ನಡದಲ್ಲಿ ಜೈನ ಸಂಸ್ಕೃತಿಯನ್ನು ಸಾರುವ ಮಹತ್‌ಕೃತಿ' ಎಂದರು.

ಮುಖ್ಯ ಅತಿಥಿ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯ ನಿರ್ದೇಶಕರಾದ ಡಾ.ಎನ್. ಸುರೇಶ್‌ಕುಮಾರ್‌ರವರು ಮಾತನಾಡಿ 'ರತ್ನಾಕರವರ್ಣಿಯ ಕೃತಿಗಳು ಹದಿನಾರನೇ ಶತಮಾನದಲ್ಲಿ ಜೈನ ಸಿದ್ಧಾಂತವನ್ನು ಮರು ಪ್ರತಿಷ್ಠಾಪಿಸುವ ಕಾರ್ಯದಲ್ಲಿ ಯಶಸ್ಸನ್ನು ಪಡೆದಿರುವುದು ಇಂದಿಗೂ ಆ ಕೃತಿಯ ಪ್ರಸ್ತುತೆಯನ್ನು ಸಾರುತ್ತದೆ' ಎಂದರು. ಮಂಗಳೂರು ವಿಶ್ವವಿದ್ಯಾನಿಲಯದ ರತ್ನಾಕರವರ್ಣಿ ಅಧ್ಯಯನ ಪೀಠದ ಸಂಯೋಜಕರಾದ ಡಾ.ಸೋಮಣ್ಣರವರು ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ರತ್ನಾಕರವರ್ಣಿಯ ಕಾರ್ಯಕ್ರಮ ನಡೆಸಲು ಅವಕಾಶ ಕಲ್ಪಿಸಿರುವ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರ ಸಾಹಿತ್ಯದ ಅಭಿಮಾನಕ್ಕೆ ಗೌರವದ ಅಭಿನಂದನೆಗಳನ್ನು ಸಲ್ಲಿಸಿದರು. ಶ್ರವಣಬೆಳಗೊಳ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಗೇಂದ್ರ, ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಯುಗಧರ್ಮ ರಾಮಣ್ಣ, ಜೈನ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ವೃಷಭಕುಮಾರ್ ಉಪಸ್ಥಿತರಿದ್ದರು. ಕುವೆಂಪು ವಿಶ್ವವಿದ್ಯಾಲಯದ ಡಾ. ನೆಲ್ಲಿಕಟ್ಟೆ ಸಿದ್ದೇಶ್, ಮಡಿಕೇರಿ ಜನರಲ್ ಕಾರ್ಯಪ್ಪ ಕಾಲೇಜಿನ ಡಾ.ಮುಸ್ತಫಾ, ಬೆಂಗಳೂರಿನ ಜಿಂದಾಲ್ ಕಾಲೇಜಿನ ಡಾ.ಭಾಗ್ಯವತಿ, ಹಾಸನದ ಸರ್ಕಾರಿ ಕಾಲೇಜಿನ ಡಾ.ವೆಂಕಟೇಶ್ ಇವರುಗಳು ಭರತೇಶ ವೈಭವ ಕೃತಿಯ ಸಾಂಸ್ಕೃತಿಕ ಅನನ್ಯತೆಗೆ ಸಂಬಂಧಿಸಿದಂತೆ ಪ್ರಬಂಧಗಳನ್ನು ಮಂಡಿಸಿದರು. ಕುವೆಂಪು ವಿಶ್ವವಿದ್ಯಾಲಯದ ಡಾ.ನಾಗಾರ್ಜುನ್ ಸಮಾರೋಪ ನುಡಿಗಳನ್ನು ಆಡಿದರು.

## ಅಂಬಿಕಾ ಶಾಲೆಯ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿ





**ಶ್ರವಣಬೆಳಗೊಳ :** ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶ್ರೀಕ್ಷೇತ್ರದ ಗೊಮ್ಮಟನಗರದಲ್ಲಿ ಶ್ರೀ ಅಂಬಿಕಾ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆ, ಎಸ್‌ಎನ್. ಪ್ರೌಢಶಾಲೆ ಹಾಗೂ ಅಂಬಿಕಾ ಆಂಗ್ಲಮಾಧ್ಯಮ ಪ್ರೌಢಶಾಲೆಯ ಕಟ್ಟಡ ನಿರ್ಮಾಣದ ಕಾಮಗಾರಿ ಪ್ರಗತಿಯಲ್ಲಿದೆ. ಕಟ್ಟಡ ನಿರ್ಮಾಣಕ್ಕೆ ದಾನ ನೀಡಲಿಚ್ಛಿಸುವವರು ಎಸ್‌ಎಸ್‌ಡಿಜೆಜೆಪಿ ಸಂಘದ ಕಾರ್ಯದರ್ಶಿಯವರನ್ನು (ದೂ. 8105929192) ಸಂಪರ್ಕಿಸಬಹುದು.

## ಪುಷ್ಪರಾಜ್‌ರವರು ವಯೋನಿವೃತ್ತಿ



**ಶ್ರವಣಬೆಳಗೊಳ, ನ.30 :** ಶ್ರೀ ಅಂಬಿಕಾ ಹಿ.ಪ್ರಾ. ಶಾಲೆಯ ಮುಖ್ಯ ಶಿಕ್ಷಕರಾದ **ಡಿ. ಪುಷ್ಪರಾಜ್**‌ರವರು ನಿವೃತ್ತಿ ಹೊಂದಿದರು. 1988 ಅಕ್ಟೋಬರ್ 31ರಂದು ಪ್ರಾತಃಸ್ಮರಣೀಯ ಕರ್ಮಯೋಗಿ ಚಾರುಶ್ರೀಗಳವರ ನೇತೃತ್ವದಲ್ಲಿ ಪ್ರಾರಂಭವಾದ ಅಂಬಿಕಾ ವಿದ್ಯಾಲಯದಲ್ಲಿ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿ ಸಹಸ್ರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದಿದ್ದಾರೆ. ಮಹಾಮಸ್ತಕಾಭಿಷೇಕ ಸೇರಿದಂತೆ ಕ್ಷೇತ್ರದಲ್ಲಿ ಜರುಗಿದ ಎಲ್ಲಾ ಧಾರ್ಮಿಕ ಕಾರ್ಯಗಳಲ್ಲಿ ಸೇವೆಸಲ್ಲಿಸಿದ್ದಾರೆ. ಅನೇಕ ಕಡೆಗಳಲ್ಲಿ ಧಾರ್ಮಿಕ ಶಿಕ್ಷಣ ನೀಡಿರುತ್ತಾರೆ. ಪ.ಪೂ. ಅಭಿನವ ಚಾರುಶ್ರೀಗಳವರು ಪುಷ್ಪರಾಜ್‌ರವರಿಗೆ ಸನ್ಮಾನಿಸಿ ಆಶೀರ್ವದಿಸಿದರು. ಶ್ರೀಕ್ಷೇತ್ರದ ಎಲ್ಲಾ ಶಿಕ್ಷಣ ಸಂಸ್ಥೆಗಳ ವತಿಯಿಂದ ಗೌರವಿಸಲಾಯಿತು.

## ಜನವರಿ ಮಾಹೆಯಲ್ಲಿ ಪ್ರಾಕೃತ ಕೋರ್ಸುಗಳ ಪರೀಕ್ಷೆ

**ಶ್ರವಣಬೆಳಗೊಳ :** ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯು ನಡೆಸುವ ವಿವಿಧ ಪ್ರಾಕೃತ ತರಗತಿಗಳ 2022–23ನೇ ಸಾಲಿನ ಪರೀಕ್ಷೆಗಳು 2024ನೇ ಜನವರಿ 27 ಮತ್ತು 28ರಂದು ನಿಗದಿಯಾಗಿದ್ದು, ದೇಶದಾದ್ಯಂತ ಇರುವ ಪ್ರಾಕೃತ ಕೇಂದ್ರಗಳಲ್ಲಿ ಏಕಕಾಲಕ್ಕೆ ಜರುಗಲಿದೆ.




ಹಾರ್ದಿಕ ಅಭಿನಂದನೆಗಳು
ಮೇಘನಾ ಮಹಾವೀರ ಪಾಟೀಲ್
M.Tech., M.Sc. (Germany) Ph.D.( Germany)
'Development of Integration of high throughput detector systems for Photon based diagnostics at Karlsruhe Research Accelerator' ವಿಷಯದ ಮೇಲೆ Prof. Dr. Marc Weber ಮತ್ತು Prof. Dr. Anke - Susanne Muller ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ಪ್ರಬಂಧ ಮಂಡಿಸಿ ಜರ್ಮನಿಯ ಕಾರ್ಲ್ಸ್‌ರೂಹೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಡಾಕ್ಟರೇಟ್ ಆಫ್ ಇಂಜಿನಿಯರಿಂಗ್ ಸೈನ್ಸ್ ಪದವಿ ಪಡೆದಿರುತ್ತಾರೆ. ಪ್ರಸ್ತುತ ಕಿರಿಯ ವಿಜ್ಞಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
ಶುಭ ಕೋರುವವರು
ತಂದೆ : ಶ್ರೀ ಮಹಾವೀರ್‌ಪ್ರಸಾದ್ ಬಿ. ಪಾಟೀಲ್, ಬೆಂಗಳೂರು
ಮೊ : 9449935091 (Retd.Engineer, NGEF)
ತಾಯಿ : ಶ್ರೀಮತಿ ಎಸ್.ಎಸ್. ಕುಸುಮ
ಮೊ : 9620695651 (Retd. SBI Officer)




Edited, Printed & Published by : Charukeerthi Bhattaraka Swamiji and Owned by Shri Digambar Jain Matha, S.D.J.M.I. Managing Committee Trust (R), Shravanabelagola-573 135.
Printer : Omkar Offset Printers, Bangalore Email : gommatavani1980@gmail.com Gommatavani Office Contact No. : 8660118443